ಬಗೆಹರಿಸಲು ಇಲಾಖೆಯು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಸುಳ್ಯ ಪಟ್ಟಣವು ಮಧ್ಯಂತರ ಮಂಡಳವಾಗಿದೆ. ಇದರ ಜನಸಂಖ್ಯೆ 1981 ರ ಜನಗಣತಿಯ ಪ್ರಕಾರ 10,394 ಇರುತ್ತದೆ. ಇದಕ್ಕೆ ಕುಡಿಯುವ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು 26 ಲಕ್ಷ ರೂಪಾಯಿಗಳ ವೆಚ್ಚದಲ್ಲಿ, ಅಂದಾಜಿನಲ್ಲಿ ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕೈಕೊಂಡಿರುತ್ತಾರೆ. ಇದರ ಪರಿಷ್ಕೃತ ಅಂದಾಜು 48 ಲಕ್ಷದ 56 ಸಾವಿರ ರೂಪಾಯಿಗಳು. ಈ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಮುಗಿಸಿ ನೀರು ಸರಬರಾಜು ಮಾಡಲು ಮಂಡಳಿಯವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ಮೈಸೂರು ದಸರಾ ಹಬ್ಬದ ವ್ಯವಸ್ಥೆಯ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬೇಕಾಗಿದೆ. ಮೈಸೂರು ದಸರ ವ್ಯವಸ್ಥೆಯು ನಡೆಯುತ್ತಾ ಇದೆ. ಅದಕ್ಕೆ ವಿರೋಧ ಪಕ್ಷದ ನಾಯಕರು, ಉಪನಾಯಕರು, ವಿರೋಧ ಪಕ್ಷದ ಇತರ ಮುಖಂಡರುಗಳು, ಇವರುಗಳನ್ನು ಕರೆದು ಮಾತನಾಡಬೇಕಾತಂತಹ ಒಂದು ಸೌಜನ್ಯವನ್ನು ಅಲ್ಲಿಯ ವ್ಯವಸ್ಥಾಪಕರಿಗೆ ಇಲ್ಲ. ಇವೊತ್ತಿನವರೆಗೂ ಯಾರನ್ನೂ ಕೂಡ ಕರೆದು ಮಾತನಾಡಲಿಲ್ಲ. ಮೈಸೂರು ದಸರ ಎಂದರೆ ಪಾವಿತ್ರ್ಯತೆ ಮತ್ತು ಪವಿತ್ರವಾದಂಥ ಹಾಗೂ ಜಗತ್ಪ್ರಸಿದ್ಧವಾದಂಥ ದಸರ ಎಂದು ಕರೆಯಲ್ಪಡುತ್ತದೆ. ಅಲ್ಲಿ ಅಧಿಕಾರಿಗಳದ್ದೇ ಮೇಲುಗೈ ಆಗಿದೆ, ಅಧಿಕಾರಿಗಳೇ ಅದಕ್ಕೆ ಅಧ್ಯಕ್ಷರು. ಅಲ್ಲಿ ಹೈಪವರ್ ಕಮಿಟಿ ಎಂದು ಬಹಳ ಉನ್ನತವಾದಂಥ ಸಮಿತಿಯು ಇದೆ. ಅದರಲ್ಲಿ ನಮ್ಮೆಲ್ಲರ ಹೆಸರುಗಳು ಕೂಡ ಇದೆ. ಆದರೆ ವರ್ಷಕ್ಕೊಮ್ಮೆ ಯಾವುದೋ ಕಾಟಾಚಾರಕ್ಕಾಗಿ ಒಂದು ಸಮಿತಿಯನ್ನು ಕರೆಯುತ್ತಾರೆ, ಬೇರೆ ಉದ್ದೇಶಗಳು ಇಲ್ಲ. ಮೈಸೂರು ನಗರದ ಮತ್ತು ಪ್ರಾಚೀನವಾಗಿ ಮತ್ತು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಈ ದಸರ ಉತ್ಸವಕ್ಕೆ ವಿರೋಧ ಪಕ್ಷದ ನಾಯಕರನ್ನು ಕರೆಯಬೇಕು, ಆ ಸದನದ ವಿರೋಧಪಕ್ಷದ ನಾಯಕರನ್ನು ಕರೆಯಬೇಕು, ವಿರೋಧಪಕ್ಷದ ಮುಖಂಡರುಗಳನ್ನು ಕರೆಯಬೇಕು. ಏನೇನು ಉತ್ಸವ ಮಾಡುತ್ತೇವೆ ಎನ್ನುವಂಥ ಒಂದು ಪ್ರಸ್ತಾಪವು ಇಲ್ಲ; ಅಲ್ಲಿ ಸಂಪೂರ್ಣವಾಗಿ ಅಧಿಕಾರಿಗಳ ದರ್ಬಾರು ನಡೆಯುತ್ತಿದೆ. ಒಂದು ಕಾಲದಲ್ಲಿ ಮಹಾರಾಜರುಗಳ ದರ್ಬಾರು ಇತ್ತು. ಈಗ ಅಧಿಕಾರಿಗಳ ದರ್ಬಾರು ನಡೆದಿದೆ. ಈ ಬಗ್ಗೆ ಚರ್ಚೆಗೆ ತಾವುಗಳು ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ. ವೆಂಕಟೇಶ್ : ಅಲ್ಲಿ ವಸ್ತು ಪ್ರದರ್ಶನದಲ್ಲಿ ಕೃಷಿ ಇಲಾಖೆಯವರು ವಾಟರ್‌ಶೆಡ್ ಮಾಡುತ್ತಾ ಇದ್ದಾರೆ. ಕರ್ನಾಟಕ ಎಲ್ಲಾ ಜಿಲ್ಲಾಪರಿಷತ್‌ನವರು ಕೂಡ ಅಲ್ಲಿ ವಾಟರ್‌ಶೆಡ್ ಎಂದು ಪ್ರದರ್ಶನ ಮಾಡುತ್ತಿದ್ದಾರೆ. ಅದಕ್ಕೆ ಪ್ರತಿಯೊಂದು ಜಿಲ್ಲಾ ಪರಿಷತ್‌ನಿಂದ ಐದು ಲಕ್ಷರೂಪಾಯಿಗಳ ಖರ್ಚು ಬರುತ್ತದೆ. ಒಂದೇ ಸ್ಕೀಮ್‌ನ್ನು ಎಲ್ಲಾ ಜಿಲ್ಲಾಪರಿಷತ್‌ನವರೂ ತೋರಿಸುತ್ತಿದ್ದಾರೆ. ಕೃಷಿ ಇಲಾಖೆಯವರೂ ತೋರಿಸುತ್ತಿದ್ದಾರೆ. ಇದಕ್ಕಾಗಿ ಎಲ್ಲಾ ಜಿಲ್ಲಾಪರಿಷತ್ ಅಧಿಕಾರಿಗಳು ಮೈಸೂರಿಗೆ ಕಾರ್‌ನಲ್ಲಿ ಬಂದು ರೂಮ್ ರಿಸರ್ವೇಶನ್ ಇತ್ಯಾದಿ ಖರ್ಚು ಪೆಚ್ಚ ಮಾಡುತ್ತಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳ ಖರ್ಚು ಆಗುತ್ತಿವೆ. ಇದೇ ರೀತಿಯಾಗಿ ಅರಣ್ಯ ಇಲಾಖೆಯವರೂ ಮಾಡುತ್ತಿದ್ದಾರೆ. ಹೀಗೆ ಹಣದ ಲೂಟಿ ಆಗುತ್ತಿದೆ.

ಛೇರ್ಮನ್ : ನಾನು ಸಂಬಂಧಪಟ್ಟ ಸಚಿವರು ಬಂದ ಮೇಲೆ ತಮಗೆ ಉತ್ತರವನ್ನು ಕೊಡಿಸುತ್ತೇನೆ. ಈಗ ಅವರು ಸದನದಲ್ಲಿ ಉಪಸ್ಥಿತರಿಲ್ಲ ; ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಉತ್ಸವದ ಸಮಿತಿಯವರು ಮೈಸೂರು ನಗರದ ಮೇಯರ್‌ರವರನ್ನು ಕೂಡ ಕರೆದಿಲ್ಲ. ಅವರನ್ನೂ ಕಡೆಗಾಣಿಸಿದ್ದಾರೆ. ಅಲ್ಲಿಯ ಜಿಲ್ಲಾಪರಿಷತ್ ಅಧ್ಯಕ್ಷರನ್ನು ಕೂಡ ಕಡೆಗಣಿಸಿದ್ದಾರೆ. ಅಲ್ಲಿಯ ವಿಭಾಗಾಧಿಕಾರಿಯವರು ಸಂಪೂರ್ಣವಾಗಿ ತನ್ನ ಸರ್ವಾಧಿಕಾರತ್ವದಿಂದ ವರ್ತಿಸುತ್ತಿದ್ದಾರೆ. ಮೈಸೂರು ದಸರದ ವಸ್ತು ಪ್ರದರ್ಶನ ಅಂದರೆ ಯಾರೋ ಬಂದು ಪಾಲ್ಕು ಚಕ್ಕುಲಿ ಅಂಗಡಿಗಳನ್ನು, ನಿಪ್ಪಟ್ಟು ಅಂಗಡಿಗಳನ್ನು ಹಾಕಿಕೊಂಡು ಉತ್ಸವವನ್ನು ಮಾಡಿ ಮುಗಿಸುವುದಿಲ್ಲ, ಅದಕ್ಕೆ ತನ್ನದೇ ಆದ ಒಂದು ಸಂಸ್ಕೃತಿಯು ಇದೆ. ಮೈಸೂರು ದಸರ ಅಂದರೆ ಅಲ್ಲಿ ಕರ್ನಾಟಕದ ಭವ್ಯಪರಂಪರೆಯನ್ನು, ಕನ್ನಡದ ಸಂಸ್ಕೃತಿಯನ್ನು ಬಿಂಬಿಸುವಂತೆ ಇರಬೇಕು, ಅದನ್ನು ಜನರಿಗೆ ತೋರಿಸತಕ್ಕಂಥಾದ್ದು ವ್ಯವಸ್ಥೆಯಾಗಬೇಕು, ವಸ್ತು ಪ್ರದರ್ಶನದ ಕಾರ್ಯಕ್ರಮಗಳಲ್ಲಿ ಸಂಗೀತ, ಸಾಹಿತ್ಯ ಕಾರ್ಯಕ್ರಮಗಳಲ್ಲಿ ಕನ್ನಡಿಗರಿಗೆ ಪ್ರೋತ್ಸಾಹ ಕೂಡ ಕೊಡುತ್ತಿಲ್ಲ ಇದಕ್ಕೆ ಒಂದು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ವಸ್ತು ಪ್ರದರ್ಶನ ಎಂದರೆ ಕರ್ನಾಟಕದ ಸಮಗ್ರತೆಯನ್ನು, ಕನ್ನಡದ ಸಂಸ್ಕೃತಿಯನ್ನು, ಕನ್ನಡದ ಇತಿಹಾಸವನ್ನು, ಕರ್ನಾಟಕದ ಪರಂಪರೆಯನ್ನು, ಅರಮನೆಯ ವೈಭವವನ್ನು ಇವೆಲ್ಲವನ್ನೂ ತೋರಿಸತಕ್ಕಂಥದ್ದು ಒಂದು ವಸ್ತು ಪ್ರದರ್ಶನ. ಇದು ಯಾವುದೂ ಇಲ್ಲ, ಮತ್ತು ಸಂಗೀತ, ಸಾಹಿತ್ಯದ ಬಗ್ಗೆ ಅವಕಾಶವನ್ನು ಕನ್ನಡಿಗರಿಗೆ ಅಲ್ಲಿ ಕೊಡುತ್ತಿಲ್ಲ. ಈ ರೀತಿಯಾದಂಥ ಪರಿಸ್ಥಿತಿಯ ಅನೇಕ ಸಮಸ್ಯೆಗಳು ಅಲ್ಲಿ ಉದ್ಭವವಾಗಿದೆ. ದಯಮಾಡಿ.....

ಛೇರ್ಮನ್ : ಮಂತ್ರಿಗಳು ಬಂದಾಗ ಅದಕ್ಕೆ ಸರಿಯಾದ ಉತ್ತರವನ್ನು ಕೊಡಿಸೋಣ. ಈ ವಿಷಯದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹೆಸರಿಗೆ ಉನ್ನತವಾದ ಸಮಿತಿಯೆಂದು ಮಾಡಿದ್ದಾರೆ. ಆ ಸಮಿತಿಯಲ್ಲಿ ಇವತ್ತಿನ ದಿನ ಈ ಸದನದ ವಿರೋಧ ಪಕ್ಷದ ನಾಯಕರು ಬರಬೇಕಾಗಿತ್ತು. ಆ ಸದನದ ವಿರೋಧ ಪಕ್ಷದ ನಾಯಕರು ಬರಬೇಕಾಗಿತ್ತು. ಎಲ್ಲಾ ಪಕ್ಷದ ಅಧ್ಯಕ್ಷರು, ಪಕ್ಷದ ಮುಖಂಡರುಗಳನ್ನು ಕರೆಯಿರಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಸಲಹೆಯನ್ನು ಕೊಟ್ಟೆ. ಇವತ್ತಿನವರೆಗೂ ಪಕ್ಷದ ಯಾವ ಮುಖಂಡರುಗಳನ್ನು ಕರೆದಿಲ್ಲ. ಇದರ ಬಗ್ಗೆ ತಕ್ಷಣ ಅವರನ್ನು ಕರೆಯಬೇಕು. ಮೈಸೂರು ಎಂದರೆ ಅದು ಬರೀ ಮೈಸೂರು ಜಿಲ್ಲೆಯಲ್ಲ. ಜಗತ್‌ಪ್ರಸಿದ್ಧವಾದಂಥ ಒಂದು ಪವಿತ್ರವಾದಂಥ ದಸರಾ ಉತ್ಸವ. ಆ ಉತ್ಸವಕ್ಕೆ ಬರುವಂಥ ಪ್ರವಾಸಿಗರು ಲಕ್ಷಾಂತರ ಮಂದಿ ಬರುತ್ತಾರೆ. ಅವರ ವ್ಯವಸ್ಥೆಯೇನು? ರಸ್ತೆಯ ವ್ಯವಸ್ಥೆಯೇನು? ಯಾವುದೂ ನಮಗೆ ಗೊತ್ತಿಲ್ಲ. ಸಂಪೂರ್ಣವಾಗಿ ನಾವು ಕಗ್ಗತ್ತಲಲ್ಲಿ ಕುಳಿತಿದ್ದೇವೆ. ಆದುದರಿಂದ ದಯಮಾಡಿ ಸರ್ಕಾರದವರು ಪರಿಣಾಮಕಾರಿಯಾದಂಥ ಹೇಳಿಕೆಯನ್ನು ಕೊಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಛೇರ್ಮನ್ : ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ. ಅವರು ಬಂದಮೇಲೆ ಉತ್ತರವನ್ನು ಕೊಡಿಸೋಣ.

ಶ್ರೀ ವಾಟಾಳ್ ನಾಗರಾಜ್ : ಹೋದಸಾರಿ ಉತ್ಸವ ಒಂದು ಸಾರಿ ಬನ್ನಿಮಂಟಪಕ್ಕೆ ಹೋಗಿ ಮತ್ತೆ ಉತ್ಸವ ಹಿಂದಕ್ಕೆ ಬರಬೇಕು ಎನ್ನತಕ್ಕಂಥಾದ್ದು ಇತ್ತು.

ಈ ಸಾರಿ ಒಂದೇ ಸಾರಿ ಉತ್ಸವ ಹೋಗಬೇಕು, ಮತ್ತೆ ಹಿಂದಕ್ಕೆ ಬರಬಾರದು ಎನ್ನತಕ್ಕಂಥ ಉದ್ದೇಶ ಇದೆ.

ಛೇರ್ಮನ್ : ಇದಕ್ಕೆಲ್ಲಾ ಸರಿಯಾದ ಉತ್ತರವನ್ನು ಸಂಬಂಧಪಟ್ಟಂಥ ಮಂತ್ರಿಗಳಿಂದ ಕೊಡಿಸೋಣ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ತಾವು ಇದರ ಬಗ್ಗೆ ಒಂದು ಪರಿಣಾಮಕಾರಿಯಾಗಿರತಕ್ಕಂಥ ಹೇಳಿಕೆಯನ್ನು ಕೊಡಿಸಬೇಕು. ಈ ಉತ್ಸವ ಇದು ಬಹಳ ಚೆನ್ನಾಗಿ ನಡೆಯಬೇಕು. ಎಲ್ಲರೂ ಸಂತೋಷವಾಗಿರಬೇಕು. ಎಲ್ಲರಿಗೂ ಬೇಕಾಗತಕ್ಕಂಥ ಉತ್ಸವ ಆಗಬೇಕು. ಅದಕ್ಕೋಸ್ಕರ ನಾನು ತಮಗೆ ಹೇಳುತ್ತಿದ್ದೇನೆ.

ಛೇರ್ಮನ್ : ಈಗ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಮಂತ್ರಿಗಳು ಪರ್ಯಾಲೋಚನಾ ಪ್ರಸ್ತಾಪವನ ಮಂಡಿಸಬೇಕು. 1991 ನೇ ಇಸವಿಯ ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕ.

ಶಾಸನ ರಚನಾ ಕಾರ್ಯಕಲಾಪಗಳು

1991ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾನೂನು ಮಂತ್ರಿಗಳು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, 1991 ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾಪವನ್ನು ಮಂಡಿಸಲಾಯಿತು)

SRI BLASIUS M. D'SOUZA : It is a very simple amendment to the Lokayuktha Act.....

ಶ್ರೀ ವಾಟಾಳ್ ನಾಗರಾಜ್ : ಇದು ಸಣ್ಣ ತಿದ್ದುಪಡಿಯಾದರೂ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ಆದುದರಿಂದ ಅರ್ಧ ಘಂಟೆ, ಮುಕ್ಕಾಲು ಘಂಟೆ ಮಧ್ಯೆ ಯಾವಾಗಲೂ ಪ್ರತಿದಿನ ಊಟಕ್ಕೆ ಅವಕಾಶ ಕೊಡುತ್ತಿದ್ದಂತೆ, ಈಗ ಸಭೆಯನ್ನು ಮುಂದುವರಿಸಿ ನಂತರ ಈ ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರಿಗೆ ಲೋಕಾಯುಕ್ತದ ಬಗ್ಗೆ ವಿಶ್ವಾಸ ಇಲ್ಲ. ಆ ವರದಿಗೆ ಬೆಲೆ ಇಲ್ಲ. ಅವರಿಗೆ ಅಲ್ಲಿ ಕೊಡತಕ್ಕಂಥ ಸಂಬಳವನ್ನು ಹೆಚ್ಚಿಗೆ ಮಾಡಿದರೆ ಏನು ಅರ್ಥ? ಈ ಮೊಸಳೆ ಕಣ್ಣೀರು ಬೇಡ. ಅಲ್ಲಿಂದ ಬಂದಂಥ ವರದಿಗಳಿಗೆ ಸರ್ಕಾರ ಏನು ಬೆಲೆಯನ್ನು ಕೊಟ್ಟಿದೆ? ಏನೂ ಬೆಲೆಯನ್ನೂ ಕೊಟ್ಟಿಲ್ಲ. ಅದನ್ನು ಕಸದ ಬುಟ್ಟಿಗೆ ಹಾಕುತ್ತಿದೆ.

ಛೇರ್ಮನ್ : ಈಗ ಮಾನ್ಯ ಮಂತ್ರಿಗಳು ಪ್ರಸ್ತಾಪವನ್ನು ಮಾಡಲಿ.

SRI BLASIUS M. D'SOUZA : The Government of India has enhanced the pay of Chief Justice of the Supreme Court and the High Court Judges. The above amendment is brought before this House to put the Lokayuktha on par with the Chief Justice of High Court and the Judge of the High Court. The salaries have been increased the amendment is very simple. I would request the Hon'ble Members to pass this bill because there is absolutely no other amendment proposed to this Bill.